312

9. ಎಲ್ಲಾ ಜಡ ಟೆಂಡರುದಾರರು ತಾವು ಪಡೆದ ಸಾದೆ ವಿಶಿಷ್ಟವು 1907ನೆ ಇಸವಿ ಮೇ 31ನೆ ತಾರೀಖಿಗೆ ಮುಂಚಿತವಾಗಿಯೇ ಸಾಗಿಸಿಕೊಳ್ಳಬೇಕು. ತಪ್ಪಿದಲ್ಲಿ ಪಿಟೋ ತಾರೀಖಿನ ನಂತರ ಉಳಿಯುವ ಕತರಾವಣಿಯಾದ ಯಾ ಆಗದಿರುವ ಸಾದೆಗೆ ಜಡ ಟೆಂಡರುದಾರನಿಗೆ ಹಕ್ಕಿರುವದಿಲ್ಲ.

ನಂ.	ವ್ಯಾಟೇರ್ಷ ಹೆಸರು.	ಸುಮಾರು ಟನ್.	ಪರಾ.
1	ಕಾಡ ಮುತ್ತನಂದ್ರ	4	1. ಅರವತ್ತೆಂಟು ಸಲೆ ಅಡಿಗೆ ಒಂದು ಟನ್‌ನಂತೆ ಭಾವಿಸತಕ್ಕದ್ದು.
2	ಹೊಸಕುರಂಡಹಳ್ಳಿ	20	
3	ರಾಮಚಂದ್ರಪುರ	2	
4	ಬೆಳ್ಳಾವಿ	5	2. ಇದರಲ್ಲಿ ತೋರಿಸಿರುವ ಮೊತ್ತಕ್ಕಿಂತಲೂ ಜಾಸ್ತಿ ಸಾದೆ ದೊರೆಯಬಹುದು.
5	ಮಲ್ಲಪ್ಪನಹಳ್ಳಿ	15	
6	ಲಕ್ಷ್ಮಿಸಾಗರ	30	
7	ಯಕವಂತಪುರ	5	
8	ಬೈಯಪ್ಪನಹಳ್ಳಿ	10	
9	ವಕ್ಕಲೇರಿ	70	
10	ವಾಲೂರು	80	ತೀವೆ ತಂಗೇಡಿ ಸಾದೆ.
	ಒಟ್ಟು ...	241	

ಎಸ್. ಎ. ಬಾಪೂರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ತುಮಕೂರ ಡಿಸ್ಟ್ರಿಕ್ಟ್

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸಿ ಹಾರ್ ವೆ ಪ್ರಸಿದ್ಧಪತ್ರಿಕೆ.

ತಾರೀಖು ನೆ ಮಾರ್ಚ್ 1907.

ತುಮಕೂರು ತಾಲ್ಲೂಕು ಕೋಳಾಲದ ಹೋಬಳಿ ಕರೇಕಲ್ಲು ಜೋಡಿ ಗ್ರಾಮವು 1907ನೆ ಇಸವಿ 16ನೆ ಏಪ್ರೆಲ್ ತಾರೀಖಿನಲ್ಲಿ ಕರೇಕಲ್ಲು ಗ್ರಾಮದಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ವಿಕ್ರಯಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಗ್ರಾಮವು ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿರುವ ಸಂದರ್ಭದಲ್ಲಿ ತುಮಕೂರು ತಾಲ್ಲೂಕು ಅಮಲ್ದಾರ್ರು ಅವರ ಇಷ್ಟಾನುಸಾರವಾಗಿ ಗ್ರಾಮವನ್ನು ಪೂರ್ತಿಯಾಗಿ ಆಗಲಿ ಅಥವಾ ವೃತ್ತಿಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಆಗಲಿ ಹರಾಜು ಮಾಡಬಹುದು.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಕೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿನಗಳಲ್ಲಿ ಪಾವತೀ ಮಾಡಲ್ಪಡದೇ ಹೋದರೆಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅವರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಮುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ವಿಜಂಟು ಯಾ ಮುತಾಲೀಕರಾಗಿ ಸವಾಲ್ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾರ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಭಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರನು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟು ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯಾಗಲೀ ಯಾ ವಿಸ್ತೀರ್ಣದಲ್ಲಿಯಾಗಲೀ ಇರುವ ಸ್ಖಲಿತ್ಯ (ಲೋಸ) ಗಳಿಗೆ ಸರ್ಕಾರ್ ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡಿಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಆವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮೊಯಿದಾಲ್ಲಿ ಗವರ್ನಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಆರ್ಥಾತ್ ಅಪ್ಪೀಲಿನಲ್ಲಿ ಆಗುವ ಫೈನಲ್ ಹುಕುಮಿಗೆ ಬದ್ಧನಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಭೂಮಿ ಸ್ವಭಾವ. ಖುಷ್ಕಿ, ತರಿ, ಬೆಳಿ ಅಥವಾ ಬಾಗಾಯತು.	ಜಿಲ್ಲೆ.	ಎಕರೆ.	ಅಂದಾಜು ಮೊಬಲಗು	ಸಾಲಕ್ಕಾಗಿ ಕೊಡತಕ್ಕ ಜೋಡಿ.	ಸರ್ಕಾರಕ್ಕೆ ಬರಬೇಕಾದ ಸೋಟಿನ ಪೈಕಿಗೆ ಸಲುವ ಬಾಕಿ ಮೊಬಲಗು	ಹರಾಜು ಆಗುವ ತಾರೀಖು.	ಹರಾಜು ಆಗುವ ಸ್ಥಳ.
ತುನುಕೂರು.	ಹೆಗ್ಗೆರೆ.	ಕರೇಕಲ್ಲಹಳ್ಳಿ.	ಬಸವಯ್ಯ.	ಖುಷ್ಕಿ.	ಕಂ. ಕೊ. ಬ. 6—7—14 ಮುಮ್ಮುಡಿ ಪರಂಪೋಕು 2—16—13	ರೂ. ಅ. ಪೈ. 64 0 0	ರೂ. ಅ. ಪೈ. 400—0—0	ರೂ. ಅ. ಪೈ. 16—0—0	ರೂ. ಅ. ಪೈ. 1905—06ನೆ ಸಾಲಿ. 20—0—0	16ನೆ ಏಪ್ರಿಲ್ 1907.	ಕರೇಕಲ್ಲು.

ಜಕ್ಕುಬಂದಿ.
ಪೂರ್ವಕ್ಕೆ—ವಡೇರಹಳ್ಳಿ ಎಲ್ಲೆ.
ಪಶ್ಚಿಮಕ್ಕೆ—ಕೊಳಾಲ ಕಂಗಾಪುರ ಎಲ್ಲೆ.
ಉತ್ತರಕ್ಕೆ—ಸುಂಕದಹಳ್ಳಿ ಕಾಲ್ಯಹಳ್ಳಿ ಎಲ್ಲೆ.
ದಕ್ಷಿಣಕ್ಕೆ—ಕೊಳಾಲ ಪಟೇನಹಳ್ಳಿ ಎಲ್ಲೆ.

ಎಂ. ಶ್ರೀನಿವಾಸಮೂರ್ತಿ,
ಫೋರ್ ಡಿಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು

ಇನ್ಸ್ಟಿಹಾರ್.

ತಾರೀಖು 15ನೆ ಫೆಬ್ರವರಿ 1907.

ತಿರುಮಕೂಡ್ಲು ನರಸೀಪುರ ತಾಲ್ಲೂಕು ಸನಬಾ ನರಸೀಪುರದ ಹೋಬಳಿಗೆ ಸೇರಿದ ಜೋಡಿ ಹೊನ್ನೂರು ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ತಿರುಮಕೂಡ್ಲು ನರಸೀಪುರ ತಾಲ್ಲೂಕು ಕಛೇರಿಯಲ್ಲಿ 1907ನೆ ಏಪ್ರಿಲ್ ಮಾಹೆ 3ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಫೆಬ್ರವರಿ 28ನೆ ಮಾರ್ಚಿ ಮೈಸೂರು ಗೆಜೆಟ್ಟಿನ 2ನೆ ಭಾಗದ 61—62ನೆ ಪೇಜುಗಳನ್ನು ನೋಡತಕ್ಕದ್ದು.

ತಾರೀಖು 15ನೆ ಫೆಬ್ರವರಿ 1907.

ತಿರುಮಕೂಡ್ಲು ನರಸೀಪುರ ತಾಲ್ಲೂಕು ತಲ್ಕಾಡು ಹೋಬಳಿಗೆ ಸೇರಿದ ಕಾಯಂಗುತ್ತಾ ವೇಗಡಹಳ್ಳಿ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ತಿರುಮಕೂಡ್ಲು ನರಸೀಪುರ ತಾಲ್ಲೂಕು ಕಛೇರಿಯಲ್ಲಿ 1907ನೆ ಏಪ್ರಿಲ್ ಮಾಹೆ 3ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಫೆಬ್ರವರಿ 28ನೆ ಮಾರ್ಚಿ ಮೈಸೂರು ಗೆಜೆಟ್ಟಿನ 2ನೆ ಭಾಗದ 60—61ನೆ ಪೇಜುಗಳನ್ನು ನೋಡತಕ್ಕದ್ದು.

ತಾರೀಖು 15ನೆ ಫೆಬ್ರವರಿ 1907.

ನಾಗಮಂಗಲ ತಾಲ್ಲೂಕು ನೆಲ್ಲಿಗೆರೆ ಹೋಬಳಿಗೆ ಸೇರಿದ ಜೋಡಿ ದೊಡ್ಡಾಪಟ್ಟು ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಸದರಿ ದೊಡ್ಡಾಪಟ್ಟು ಗ್ರಾಮದಲ್ಲಿ 1907ನೆ ಏಪ್ರಿಲ್ ಮಾಹೆ 2ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಫೆಬ್ರವರಿ 28ನೆ ಮಾರ್ಚಿ ಮೈಸೂರು ಗೆಜೆಟ್ಟಿನ 2ನೆ ಭಾಗದ 59—60ನೆ ಪೇಜುಗಳನ್ನು ನೋಡತಕ್ಕದ್ದು.

ಟಿ. ಕೆ. ಸುಂದರರಾಜ್ಯಯ್ಯಂಗಾರ್,
ಫೋರ್ ಡಿಪ್ಯುಟಿ ಕಮಿಷನರ್.